ರೀತಿ ಕೆಲವು ಸೀಟ್‌ಗಳಾದರೂ ಕರ್ನಾಟಕದಲ್ಲಿ ನಮಗೆ ಕೊಡಿ ಎಂದು ಕೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದ ನೀತಿ ಏನು, ಇದು ಒಂದು ಪ್ರಶ್ನೆ. ಈ ವೈದ್ಯಕೀಯ ದಂತ, ತಾಂತ್ರಿಕ ಕಾಲೇಜುಗಳು ಒಂದು ತರಹ ಕಂಠ ಶೋಷಣೆ ಆಗಿದೆ ಬಿಡಿ. ಇದನ್ನು ನಾವು ಹೇಳಿದರೂ ಏನು ಪ್ರಯೋಜನ ಆಗುವುದಿಲ್ಲ. ಕೋಟ್ಯಾಂತರ ರೂ. ಲೂಟಿ ಮಾಡತಕ್ಕಂಥಹ ಒಂದು ರೀತಿಯ ಪಾಳೇಗಾರರಂತೆ ಆಗಿವೆ. ಇವುಗಳನ್ನು ಯಾರೇ ನಡೆಸಲಿ ಅದು ಖಾಸಗಿಯವರು ಆಗಿರಬಹುದು. ಯಾರೇ ಆಗಿರಬಹುದು. ಆದರೆ ಇಲ್ಲಿ ಒಂದು ದೊಡ್ಡ ದುರಂತವೇ ನಡೆಯುತ್ತಾ ಇದೆ. ಇದೆಲ್ಲಾ ಸೇರಿಸಿ ನೀವು ರಾಷ್ಟ್ರೀಕರಣ ಮಾಡುವಂತಹ ಚಿಂತನೆ ತಮ್ಮ ತಲೆಯಲ್ಲಿ ಇದೆಯೇ ಎನ್ನುವಂತಹ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಿ.

ಡಾ॥ ಶಂಕರ್ ನಾಯಕ್ : ಮಾನ್ಯ ಅಧ್ಯಕ್ಷರೆ, ಈ ಗಡಿನಾಡು ಸೀಟ್‌ಗಳ ಹಂಚಿಕೆ ಹಿಂದೆ ಇದ್ದವು ಎಂದು ನಾನು ಕೇಳಿದ್ದೇನೆ. ಇತ್ತೀಚಿನ ದಿನಗಳಲ್ಲಿ ಅದು ಇಲ್ಲ. ಆದರೆ ಅದಕ್ಕೆ ಬೇಡಿಕೆ ಇದೆ ಅನೇಕ ಜನ ಬಂದು ನನ್ನನ್ನೂ ಕೇಳಿದ್ದಾರೆ. ಅದರ ಬಗ್ಗೆ ಸರ್ಕಾರದಲ್ಲಿ ಚಿಂತನೆ ಮಾಡಿ ಪರಿಗಣಿಸಲು ಆಗುತ್ತದೆಯೇ ಇಲ್ಲವೇ ಎಂದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಸಚಿವರ ಉತ್ತರವನ್ನು ಬಹಳ ದೀರ್ಘವಾಗಿ ಕೇಳಿದ್ದೇನೆ. ಆದರೆ ನಾವು ಏನು ಆತಂಕವನ್ನು ವ್ಯಕ್ತಪಡಿಸಿದ್ದೇವೆ, ಅದು ಯಾವುದಕ್ಕೂ ಅವರು ಸಮರ್ಥ ರೀತಿಯಲ್ಲಿ ಉತ್ತರ ಕೊಟ್ಟಿಲ್ಲ. It is not heroic on the state's part to perpetuate its own errors and its own mistakes. ಹಿಂದೆ ಆಗಿತ್ತು ಎಂದು ಹೇಳುತ್ತಾರೆ. ಸರ್ಕಾರ ಎಷ್ಟು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿತ್ತು ಅದನ್ನು ತೆಗೆದುಕೊಳ್ಳದೆ, ಹಿಂದೆ ಎಚ್ಚರಿಕೆಯನ್ನು ಕೊಟ್ಟರೂ ಕೂಡ ಅದನ್ನು ಗಮನಿಸದೆ, ಬಹಳ ಕ್ಯಾಷುಯಲ್ ಆಗಿ ಉಡಾಫೆತನದಿಂದ ಇವತ್ತು ಎಷ್ಟು ವಿದ್ಯಾರ್ಥಿಗಳಿಗೆ ಅಂಧಕಾರವನ್ನು ಎರೆಚಿದ್ದೀರಿ ಅದನ್ನು ಪ್ರತಿಭಟಿಸಿ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಶ್ರೀ ಎಸ್. ಸುರೇಶ್ ಕುಮಾರ್ ಮತ್ತು ಶ್ರೀ ಎ. ರಾಮದಾಸ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ ಆರ್ಟಿಕಲ್ 371 ಎಂದು ಹೇಳುತ್ತಾರಲ್ಲಾ, ಈ ಕಲಂ 371ಕ್ಕೆ ಮಹಾರಾಷ್ಟ್ರದ ಸಲುವಾಗಿ, ಆಂಧ್ರದ ಸಲುವಾಗಿ ಬೇರೆ ಬೇರೆ ರಾಜ್ಯದ ಸಲುವಾಗಿ ಅಮೆಂಡ್‌ಮೆಂಟ್ ಕೇಂದ್ರ ಸರ್ಕಾರ ಮಾಡಿದೆ, ಆ ಅಮೆಂಡ್‌ಮೆಂಟ್ ಮಾಡಬೇಕಾದರೆ ರಾಜ್ಯ ಸರ್ಕಾರದವರು ರೆಸಲ್ಯೂಷನ್ ಮಾಡಿಕೊಂಡು ಮಾಡುತ್ತಾರೆ, ಇಲ್ಲಿ ತಾವಾಗಿಯೇ ಮಾಡಲು ಬರುವುದಿಲ್ಲ. ಆ ಕಾಲದಲ್ಲಿ ಮಹಾರಾಷ್ಟ್ರದವರು ಏನಾದರೂ ಪ್ರಭಾವವಿರಬಹುದು. ಅದರ ಸಲುವಾಗಿ ಮಾಡಿದ್ದಾರೆ. ಆಂಧ್ರ ಸರ್ಕಾರದ ಪ್ರಭಾವ ಕೇಂದ್ರ ಸರ್ಕಾರದ ಮೇಲೆ ಇರಬಹುದು,